# ಮೂರು ದಾರಿಗಳು

'ಅನ್ನವನು ಇಕ್ಕುವುದು, ನನ್ನಿಯನು ನುಡಿಯುವುದು, ತನ್ನಂತೆ ಪರರ ಬಗೆಯುವುದು'– ಇವು ಭಗವಂತನನ್ನು ಒಲಿಸಿಕೊಳ್ಳುವ ಮೂರು ದಾರಿಗಳು ಎನ್ನುತ್ತಾನೆ ಸರ್ವಜ್ಞ ಕವಿ. ಭಗವಂತ ಒಲಿಯುತ್ತಾನೋ, ಇಲ್ಲವೋ– ಅದು ನಮ್ಮ ನಮ್ಮ ನಂಬಿಕೆಗೆ ಸಂಬಂಧಿಸಿದ್ದು. ಆದರೆ ವ್ಯಷ್ಟಿ ಜೀವನದ ಉನ್ನತೀಕರಣಕ್ಕೆ ಹಾಗೂ ಸಮಷ್ಟಿಯ ಹಿತಕ್ಕೆ ಈ ಮೂರು ಅಗತ್ಯವೆಂಬುದಂತೂ ಸತ್ಯ.

ಸರ್ವಜ್ಞ ಸೂಚಿಸಿರುವ ಈ ಮೂರು ದಾರಿಗಳು ಮೇಲ್ನೋಟಕ್ಕೆ ಸರಳವೆನ್ನಿಸಿದರೂ, ಆಚರಣೆಯಲ್ಲಿ ಕಠಿಣ. ಮೊದಲು 'ಅನ್ನವನ್ನು ಇಕ್ಕುವುದು' ಎಂಬುದನ್ನೇ ನೋಡೋಣ. ಸಮಾರಂಭಗಳಲ್ಲಿ ಪ್ರತಿಷ್ಠೆಯ ಪ್ರದರ್ಶನಕ್ಕೋ, ಇನ್ನು ಯಾವುದೋ ಕಾರಣದಿಂದಲೋ ಅತಿಥಿಗಳಿಗೆ ಬಿಕ್ಕಿ ಬೀರಾಡುವಷ್ಟು ಆಹಾರ ಪದಾರ್ಥಗಳನ್ನು ಉಣಬಡಿಸುವುದನ್ನು ನಾವು ನೋಡುತ್ತಿರುತ್ತೇವೆ. ಇದು ನಿಜವಾದ ಅರ್ಥದಲ್ಲಿ ಸರ್ವಜ್ಞ ಸೂಚಿಸಿದ 'ಅನ್ನವನ್ನು ಇಕ್ಕುವ' ಕ್ರಿಯೆಯಲ್ಲ. ಆರ್ಥಿಕವಾಗಿ ದುರ್ಬಲರಾಗಿದ್ದು, ಹಸಿವಿನಿಂದ ನರಳುತ್ತಿರುವವರಿಗೆ ಪ್ರೀತಿಯಿಂದ ಉಣಬಡಿಸಿ, ಅವರಲ್ಲಿ ಕುಂದುತ್ತಿರುವ ಪ್ರಾಣಶಕ್ತಿಯನ್ನು ಉದ್ದೀಪಿಸುವಂತೆ ಮಾಡುವುದೇ 'ಅನ್ನವನ್ನು ಇಕ್ಕುವ' ಅರ್ಥಪೂರ್ಣ ಕ್ರಿಯೆ. ಪ್ರಾಣಿ, ಪಕ್ಷಿ, ಕ್ರಿಮಿ, ಕೀಟಗಳೊಂದಿಗೂ ನಮ್ಮ ಆಹಾರವನ್ನು ಹಂಚಿಕೊಳ್ಳಬೇಕು ಎನ್ನುತ್ತಾರೆ ತಿಳಿದವರು. ಉಪನಿಷತ್ತು ಇದನ್ನೇ 'ಸಹನೌ ಭುನಕ್ತು' ಎಂದಿರುವುದು. ಇಂಥ 'ಭೂತದಯೆ' ನಮ್ಮಲ್ಲಿರುವ ಸ್ವಾರ್ಥ ಲೋಭಗಳನ್ನು ಕರಗಿಸುತ್ತದೆ.

ಇನ್ನು 'ನನ್ನಿಯನ್ನು ನುಡಿಯುವ' ಕೆಲಸ. ಕಾಯೇನ ವಾಚಾ ಮನಸಾ ಸತ್ಯವನ್ನೇ ಅನುಸರಿಸುವಂಥ ವ್ರತ ಅತ್ಯಂತ ಕಠಿಣವಾದುದು. ಸಾಮಾನ್ಯರ ಪಾಲಿಗೆ ಅಸಾಧ್ಯವೆಂದರೂ ತಪ್ಪಲ್ಲ. ಲೋಕ ವ್ಯವಹಾರದಲ್ಲಿ ಸತ್ಯವನ್ನು ಬಚಿಟ್ಟು, ಅನಿವಾರ್ಯವಾಗಿ ಸುಳ್ಳಿಗೆ ಶರಣಾಗಬೇಕಾಗುವ ಪ್ರಸಂಗಗಳು ಎದುರಾಗುತ್ತಿರುತ್ತವೆ. ನಮ್ಮ ಗೌರವ ಘನತೆಗಳನ್ನು ಕಾಪಾಡಿಕೊಳ್ಳಬೇಕಾದ ಪರಿಸ್ಥಿತಿಗಳಿರಬಹುದು; ಬೇರೊಬ್ಬರಿಂದ ಸಹಾಯವನ್ನು ಪಡೆಯಲೇ ಬೇಕಾದ ಒತ್ತಡಗಳಿರಬಹುದು; ನಮ್ಮ ನಿಜವಾದ ಬಣ್ಣ ಇತರರಿಗೆ ತಿಳಿಯಬಾರದು ಎನ್ನುವ ಆಷಾಢಭೂತಿತನ ಇರಬಹುದು. ಇಂಥ ಹಲವು ಸಂದರ್ಭಗಳಲ್ಲಿ ಸುಳ್ಳನ್ನೇ ನಾವು ಆಶ್ರಯಿಸುತ್ತೇವೆ. ಕೆಲವೊಮ್ಮೆ ಬೇರೊಬ್ಬರ ದಾಕ್ಷಿಣ್ಯಕ್ಕೆ ಸಿಲುಕಿ, ಸುಳ್ಳಾಡುತ್ತೇವೆ. ಇಂಥ ಇಕ್ಕಟ್ಟು ಬಿಕ್ಕಟ್ಟುಗಳಲ್ಲೂ ಧೃತಿಗೆಡದೆ, ಹರಿಶ್ಚಂದ್ರನಂತೆ, ಗಾಂಧೀಜೀಯಂತೆ 'ಸತ್ಯವ್ರತ'ರಾಗಿ ಬದುಕುವವರನ್ನು ಭಗವಂತ ಮೆಚ್ಚುತ್ತಾನೆ ಎಂಬುದು ಸರ್ವಜ್ಞನ ಅಭಿಪ್ರಾಯ.

ಮೂರನೆಯದು– 'ತನ್ನಂತೆ ಪರರ ಬಗೆಯುವ' ಕೆಲಸ. ಇದು ಸತ್ಯವ್ರತ ಪಾಲನೆಯಷ್ಟು ಕಠಿಣವಲ್ಲವಾದರೂ; ಸುಲಭವೆನ್ನುವಂತಿಲ್ಲ. ನಮ್ಮ ಸಹಜೀವಿಗಳನ್ನು ನಮ್ಮೊಂದಿಗೆ ಸಮೀಕರಿಸಿಕೊಂಡು ನೋಡುವ ಮನೋಧರ್ಮ ಆತ್ಮವ್ಯವಸಾಯದಿಂದ ಬರುವಂಥದೇ ಹೊರತು ಹುಟ್ಟಿನಿಂದ ಬರುವಂಥದಲ್ಲ. ಇತರರ ಸುಖ ದುಃಖಗಳನ್ನು ಆವಾಹಿಸಿಕೊಂಡು, ಪರಭಾವ ತಾದಾತ್ಮ್ಯವನ್ನು ಹೊಂದುವ ವ್ಯಕ್ತಿಯನ್ನು 'ಪರಮಯೋಗಿ' ಎಂದು ಪರಿಗಣಿಸುತ್ತದೆ ಭಗವದ್ಗೀತೆ. 'ಯಾರು ಸರ್ವಕಾಲ ಸರ್ವಾವಸ್ಥೆಗಳಲ್ಲೂ ಇತರರ ಸುಖ ದುಃಖಾದಿಗಳನ್ನು, ತನ್ನದು ಆ ಸ್ಥಿತಿ, ತನ್ನದು ಆ ಗತಿ ಎಂಬಂತೆ ನೋಡಿಕೊಳ್ಳುತ್ತಾನೋ ಅವನೇ ಪರಮಯೋಗಿ' ಎಂಬುದು ಡಿ.ವಿ.ಜಿ.ಯವರ ವ್ಯಾಖ್ಯಾನ. ನಮ್ಮನ್ನು ಇನ್ನೊಬ್ಬರ ಸ್ಥಾನದಲ್ಲಿರಿಸಿಕೊಂಡು, ಅವರ ಸಂದರ್ಭ, ಸಂಕಟ, ಸಮಸ್ಯೆಗಳನ್ನು ನಮ್ಮದಾಗಿಸಿಕೊಂಡು ವಿಶ್ಲೇಷಿಸುವ, ವಿಮರ್ಶಿಸುವ ಪ್ರವೃತ್ತಿಯನ್ನು ಅಥವಾ ಮಾನಸಿಕ ಹದವನ್ನು ಎಟುಕಿಸಿಕೊಳ್ಳುವುದು ನಿರಂತರ ಸಾಧನೆಯಿಂದ, ಆತ್ಮಾವಲೋಕನದಿಂದ ಮಾತ್ರ ಸಾಧ್ಯ. ಯಾವುದೋ ಸಂದರ್ಭದಲ್ಲಿ ಇನ್ನೊಬ್ಬರು ಕೈಗೊಂಡ ನಿರ್ಧಾರ ನಿಲುವುಗಳನ್ನೋ, ಪ್ರತಿಕ್ರಿಯೆಯನ್ನೋ ಬೆಲೆ ಕಟ್ಟುವುದು, ಟೀಕಿಸುವುದು ಸುಲಭ. ಆದರೆ ನಾವೇ ಅವರಾಗಿದ್ದಿದ್ದರೆ ನಮ್ಮ ನಿಲುವೇನಾಗಿರುತ್ತಿತ್ತು ಎಂಬ ನಿಟ್ಟಿನಲ್ಲಿ ಯೋಚಿಸುವುದು ಕಷ್ಟ. ಹೀಗೆ ಪರರ ಸಂಕಟ ಸಮಸ್ಯೆಗಳನ್ನು ನಮ್ಮದೇ ಎಂಬಂತೆ ಪರಿಭಾವಿಸುವ ಮನಃಸ್ಥಿತಿಯನ್ನು 'ಆತ್ಮೌಪಮ್ಯ ಸ್ಥಿತಿ' ಎನ್ನುತ್ತದೆ ಗೀತೆ. ಇದನ್ನೇ ಇಂಗ್ಲಿಷಿನಲ್ಲಿ Empathy ಎನ್ನುತ್ತಾರೆ. 'ಆತ್ಮವತ್ ಸರ್ವ ಭೂತಾನಿ ಯಃ ಪಶ್ಯತಿ ಸ ಪಶ್ಯತಿ' ಎನ್ನುವುದರ ಅರ್ಥವೂ ಇದೇ. ಇಂಥ 'ಸಮಭಾವ ಸ್ತರ'ವನ್ನು ತಲುಪಿದಾತ ಭಗವಂತನಿಗೆ ಪ್ರಿಯನಾಗುತ್ತಾನೆ ಎಂದು ಸರ್ವಜ್ಞನಂತೆ ಗಾಂಧೀಜೀಯವರೂ ನಂಬಿದ್ದರು.

■ ವೈನತೇಯ

## ಮಾತೇ ಮುತ್ತು

★ ಮರ ಗಿಡ ಹಣ್ಣು ನೀಡುತ್ತವೆ. ಹಸು ಹಾಲು ಕೊಡುತ್ತದೆ. ನದಿ ಬಾಯಾರಿಕೆ ತಣಿಸುತ್ತದೆ. ಸೂರ್ಯ ಚಂದ್ರರು ಇಡೀ ಪ್ರಪಂಚ ಬೆಳಗುತ್ತಾರೆ. ಇವು ನಮ್ಮಿಂದ ಏನನ್ನೂ ಬಯಸುವುದಿಲ್ಲ. ಹಾಗಾಗಿ ದೇವರೆಂದು ಪೂಜಿಸುತ್ತೇವೆ. ಬಡಜನರಿಗೆ ನೆರವು ನೀಡುವ ಸಜ್ಜನರು ಕೂಡ ದೇವರ ಸಮಾನ.

–ವೀರೇಂದ್ರ ಹೆಗ್ಗಡೆ

★ ಮೃತ್ಯುವೇ– ಕೆಲವರು ನಿನ್ನ ಶಕ್ತಿ ವರ್ಣಿಸಿದ್ದಾರಾದರೂ ಹೆಮ್ಮೆ ಪಡದಿರು. ನೀನು ಅಶಕ್ತ. ನೀನು ಕೊಲ್ಲುವೆನೆಂದು ಕೊಂಡಿರುವುದು ಸಾಯುವುದಿಲ್ಲ. ನಿಜವಾಗಿ ಸಾಯುವುದು ನೀನೇ.

–ಜಾನ್ ಡನ್

★ ಭೂಲೋಕದಲ್ಲಿ ಏನನ್ನು ಸಾಧಿಸಬೇಕಾಗಿದ್ದರೂ ಮೊದಲು ಅದನ್ನು ಭಾವಲೋಕದಲ್ಲಿ ಬಿತ್ತಬೇಕು. ಮೈಯಲ್ಲಿ ಯಾವ ಪರಿವರ್ತನೆ ಆಗಬೇಕಿದ್ದರೂ ಅದು ಮನದಲ್ಲಿ ಮೊಳೆತು ಬೇರೂರಬೇಕು. ಹಾಗಲ್ಲದೆ ಹೊರಗಡೆಯಿಂದ ಹೇರುವುದು ತಾತ್ಕಾಲಿಕವಾಗಿ ಶೀಘ್ರ ಫಲಕಾರಿಯಾದರೂ ಬಹುಬೇಗನೆ ವಿಫಲವಾಗುತ್ತದೆ.

–ಕುವೆಂಪು

★ ಮಾಡುವವನ ಮುಂದಿರಬೇಕು; ಹೊಡೆಯುವವನ ಹಿಂದಿರಬೇಕು.

–ಗಾದೆ

★ ಪ್ರಪಂಚದಲ್ಲಿ ಮಾಡುವುದು ಹೆಚ್ಚಾಗಿದೆ; ತಿಳಿಯಬೇಕಾದುದು ಕಡಿಮೆ ಇದೆ.

–ಡಾ. ಜಾನ್‌ಸನ್

★ ಮಾಡ ಹೊರಟಿದ್ದು ಲೋಪವಲ್ಲ, ಮಾಡದೇ ಹೋದದ್ದು ಲೋಪ; ಆತ್ಮವಿಶ್ವಾಸ ಕುಗ್ಗಿ ತಡವರಿಸಿದ್ದು ಘೋರ ಪಾಪ.

–ಎಸ್ರಾಪೌಂಡ್

★ ಆಡಿದಂತೆ ಮಾಡುವುದು ಹೇಡಿತನ! ಮಾಡಿದ್ದನ್ನು ಆಡುವುದರಲ್ಲಿ ಧೈರ್ಯವಿದೆ.

–ಶ್ರೀರಂಗ

★ ಕೇಳುವವನಿಗೆ ಮುಖ್ಯ ಎನಿಸುವಂಥದನ್ನು ಮಾತ್ರ ಹೇಳು! ನಿನಗೆ ಮುಖ್ಯ ಎನಿಸುವಂಥದನ್ನು ಮಾತ್ರ ಕೇಳು!

–ಡ್ಯಾಗ್ ಹ್ಯಾಮರ್ ಸ್ಕೋಲ್ಡ್

★ ಮೃಧುವಾದ ಮಾತುಗಳಿರಲಿ; ಕಂಕುಳಲ್ಲಿ ದೊಣ್ಣೆ ಇರಲಿ. ನಿಮಗೆ ಜಯ ಸಿದ್ಧ!

–ರೂಸ್‌ವೆಲ್ಟ್

★ 'ಅದನ್ನು ಮಾಡಲಾರೆ' ಎಂದುಕೊಳ್ಳುತ್ತಿದ್ದರೆ ನಿಜವಾಗಿಯೂ ಮಾಡಲಾರದವರಾಗುತ್ತೇವೆ. ಪ್ರತಿಯಾಗಿ 'ಅದನ್ನು ಮಾಡಬಲ್ಲೆ' ಎಂದು ಕೊಳ್ಳುತ್ತಿದ್ದರೆ ನಿಜವಾಗಿಯೂ ಮಾಡುವ ಶಕ್ತಿ ಗಳಿಸುತ್ತೇವೆ.

–ಮಹಾತ್ಮ ಗಾಂಧೀಜಿ

★ ಮಾತು ಬುದ್ಧಿವಂತರ ಹಣದ ಪೆಟ್ಟಿಗೆ, ದಡ್ಡರ ಹಣ.

–ಥಾಮಸ್ ಹಾಬ್ಸ್

★ ಮಾತನಾಡದೆ ಇರುವುದು ಮಾತನಾಡುವುದಕ್ಕಿಂತ ಕಷ್ಟ.

–ಗ್ರೀಕ್ ಗಾದೆ

★ ಮುಖವು ಸುಕ್ಕುಗಳಿಂದ ತುಂಬಿದೆ. ತಲೆಯು ನೆರೆತ ಕೂದಲಿನಿಂದ ಕೂಡಿದೆ. ಶರೀರದ ಅಂಗಾಂಗಗಳು ಶಿಥಿಲವಾಗಿವೆ. ಆದರೆ, ಆಸೆಯೊಂದೇ ಯೌವನದಿಂದ ಕೂಡಿದೆ!

–ವೈರಾಗ್ಯ ಶತಕ